# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
# ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)
## ವಾರ್ಡ್ ಸಮಿತಿ ಸಭೆ, ದಿನಾಂಕ: 04-09-2021ರ
## ಸಭಾ ನಡುವಳಿ

**ದಿನಾಂಕ: 04-09-2021ರಂದು ಬೆಳ್ಳಿಗೆ 9.00 ಗಂಟೆಗೆ** ವಾರ್ಡ್ ನಂ.06 ಥಣಿಸಂದ್ರ ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಗಳಾದ ಶ್ರೀ ರೆಡ್ಡಿ ಶಂಕರ ಬಾಬು, ಮಾನ್ಯ ವಿಶೇಷ ಆಯುಕ್ತರು, (ಆಸ್ತಿಗಳು) ಬಿಬಿಎಂಪಿ ರವರ ಅಧ್ಯಕ್ಷತೆಯಲ್ಲಿ ದಾಸರಹಳ್ಳಿ ಬಿ.ಬಿ.ಎಂ.ಪಿ ಕಛೇರಿಯ ಆವರಣದಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರಸಂ | ಸಭೆಗೆ ಹಾಜರಾಗಿರುವಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ರೆಡ್ಡಿ ಶಂಕರ ಬಾಬು | ನೋಡಲ್ ಅಧಿಕಾರಿಗಳು ವಾರ್ಡ್ ನಂ 06(ಥಣಿಸಂದ್ರ) ಹಾಗೂ ಮಾನ್ಯ ವಿಶೇಷ ಆಯುಕ್ತರು (ಆಸ್ತಿಗಳು), ಬಿಬಿಎಂಪಿ |
| 2 | ಶ್ರೀ ಸುರೇಶದೇವತರಾಜ್ | ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ, ವಾರ್ಡ್ ಸಮಿತಿ, ವಾರ್ಡ್ ನಂ 06(ಥಣಿಸಂದ್ರ) |
| 3 | ಶ್ರೀ ಚಂದನ ಎಸ್. | ಸ.ಕಾ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 4 | ಶ್ರೀ ರಾಜಶೇಖರ್ ಮೇಟಿ | ಸ.ಕಾ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ,ನಿರ್ವಹಣೆ |
| 5 | ಶ್ರೀಮತಿ ಚಿತ್ರಾಜಯರಾಮ್ | ಸ.ಕಾ.ಅ (ಘನತ್ಯಾಜ್ಯ) ಬ್ಯಾಟರಾಯನಪುರ ವಿಭಾಗ, |
| 6 | ಶ್ರೀ ಕಿರಣ್ ಬಿ | ಸ.ಕಾ.ಅ ಯೋಜನಾ ವಿಭಾಗ, ಯಲಹಂಕ ವಲಯ |
| 7 | ಶ್ರೀ ಮಲ್ಲಪ್ಪ ಕೆ. ಜಿ | ಸಂಪಿಗೆಹಳ್ಳಿ ಪೋಲಿಸ್ ಠಾಣೆ |
| 8 | ಶ್ರೀ ಸಿದ್ದೋಜಿರಾವ | ಎ.ಎಸ್.ಐ ಚಿಕ್ಕಜಾಲ ಸಂಚಾರಿ ಪೋಲಿಸ್ ಠಾಣೆ |
| 9 | ಶ್ರೀ ಸುರೇಶ | ಹೆಚ್.ಸಿ. 9079 ಕೊತ್ತನೂರು ಪೋಲಿಸ್ ಠಾಣೆ |
| 10 | ಶ್ರೀ ವಿ. ಪ್ರೇಮಕುಮಾರ್ | ಹಿ.ಆ. ಪರಿವೀಕ್ಷಕರು ವಾರ್ಡ್ ನಂ. 06 (ಥಣಿಸಂದ್ರ) |
| 11 | ಶ್ರೀ ಮಹೇಶ್‌ಕುಮಾರಎಲ್. | ಕಿ.ಆ. ಪರಿವೀಕ್ಷಕರು ವಾರ್ಡ್ ನಂ. 06 (ಥಣಿಸಂದ್ರ) |
| 12 | ಶ್ರೀ ಶಶೀಧರ | ಕಂದಾಯ ನೀರಿಕ್ಷಕರು, ಥಣಿಸಂದ್ರ |
| 113 | ಶ್ರೀ ಬಸವರಾಜಪ್ಪ | ಜಲ ಪರಿವೀಕ್ಷಕರು, ಬೆಂ.ಜ.ಮಂ |

**ಶ್ರೀ ಸುರೇಶದೇವತರಾಜ್** ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಗಳಾದ **ಶ್ರೀ ರೆಡ್ಡಿ ಶಂಕರ ಬಾಬು, ಮಾನ್ಯ ವಿಶೇಷ ಆಯುಕ್ತರು, (ಆಸ್ತಿಗಳು) ಬಿಬಿಎಂಪಿ** ರವರಿಗೆ ಹಾಗೂ ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯದ ಬಗ್ಗೆ ತಿಳಿಸಿದರು.

1. **ಕೋವಿಡ್ -19 ರ ಸಂಬಂಧ ಸೊಂಕು ಹರಡವುದನ್ನುತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮಂಜಾಗ್ರತ ಕ್ರಮಗಳ ಬಗ್ಗೆ**
   - ಮಾನ್ಯ ನೋಡಲ್ ಅಧಿಕಾರಿಗಳು ಎ.ಸಿ.ಟಿ ರವರ ಮೂಲಕ ಎರಡು ಬಾರಿ ವಾರ್ಡ್ ನಂ 06 ರಲ್ಲಿ ವಿಶೇಷ ವ್ಯಾಕ್ಸಿನೇಷನ್ ಕ್ಯಾಂಪ್‌ನ್ನು ಆಯೋಜಿಸಿದ್ದು, ಅದರಂತೆ ಹೆಗಡೆನಗರದ ಸರ್ಕಾರಿ ಉರ್ದು ಶಾಲೆಯಲ್ಲಿ ದಿನಾಂಕ 27-08-2021 ಹಾಗೂ ಎಲಿಮೆಂಟ್ಸ ಮಾಲ್‌ಯಲ್ಲಿ ದಿನಾಂಕ 03-09-2021

ರಂದು ವಾಕ್ಸಿನೇಷನ್ ಕ್ಯಾಂಪ್‌ಗಳಲ್ಲಿ ಸಾರ್ವಜನಿಕರು ಮೊದಲನೇಯ ಕೋವಿಡ್ ಲಸಿಕೆ ಡೋಸ್ ಪಡೆದಿದ್ದು, ಇದರಿಂದ ಸಾರ್ವಜನಿಕರಿಗೆ ಬಹಳ ಅನುಕೂಲವಾಗಿದ್ದು ಮತ್ತು ಈ ಕಾರ್ಯಕ್ರಮವು ಯಶಸ್ವಿಯಾಗಿದ್ದರಿಂದ ಮಾನ್ಯ ನೋಡಲ್ ಅಧಿಕಾರಿಗಳಿಗೆ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ವಂದನೆಗಳನ್ನು ಸಲ್ಲಿಸಿದರು.

- ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ರವರು ಮಾತನಾಡಿ ಹೆಗಡೆನಗರ ಪ್ರಾಥಮೀಕ ಆರೋಗ್ಯ ಕೇಂದ್ರದಲ್ಲಿ ವೈಧ್ಯಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ಡಾ// ಕೇಶವ ಪಾಣಿರವರು ವರ್ಗಾವಣೆಯಾಗಿದ್ದು, ಸದರಿಯವರ ಸ್ಥಳದಲ್ಲಿ ಹೊಸದಾಗಿ ವೈಧ್ಯಾಧಿಕಾರಿಗಳು ಬಂದಿರುತ್ತಾರೆ ಎಂದು ಸಭೆಗೆ ತಿಳಿಸಿದರು. ಮುಂದಿನ ವಾರ್ಡ್ ಸಮಿತಿಯ ಸಭೆಗೆ ಕಡ್ಡಾಯವಾಗಿ ವೈಧ್ಯಾಧಿಕಾರಿಗಳು ಹಾಜರಾಗಬೇಕಾಗಿ ಮಾನ್ಯ ನೋಡಲ್ ಅಧಿಕಾರಿಗಳು ಸೂಚಿಸಿದರು.
- ಶ್ರೀ ದಾಸಪ್ಪ ಹೆಗಡೆನಗರರವರು ಮಾತನಾಡಿ ವ್ಯಾಕ್ಸಿನೇಷನ್‌ಗಾಗಿ ನಿಯೋಜಿಸಿರುವ ಸಿಬ್ಬಂದಿಗಳ ಕೊರತೆಯಿರುವ ಕಾರಣ ಲಸಿಕೆ ಪಡೆಯಲು ಬರುವ ಸಾರ್ವಜನಿಕರನ್ನು ನಿಯಂತ್ರಿಸಲು ತೊಂದರೆಯಾಗುತ್ತಿದೆ ಎಂದು ಹಾಗೂ ಪ್ರತಿದಿನದ ಲಸಿಕೆ ವಿವರಗಳನ್ನು ವೈದ್ಯಾಧಿಕಾರಿಗಳು ವಾರ್ಡ್ ಸಮಿತಿಯ ಗ್ರೂಪ್‌ಯಲ್ಲಿ ಶೇರ್ ಮಾಡುವಂತೆ ಕ್ರಮ ವಹಿಸಬೇಕಾಗಿ ಕೋರಿದರು.

**2. ವಾರ್ಡ್ ವ್ಯಾಪ್ತಿಯಲ್ಲಿಕುಡಿಯುವ ನೀರು ಹಾಗೂ ಒಳಚರಂಡಿಗೆ ಸಂಬಂದಿಸಿದ ವಿಷಯಳ ಬಗ್ಗೆ.**

- ಹೆಗಡೆನಗರ ಪೂರ್ವ ಭಾಗ ಶಬರಿನಗರ ಮುಖ್ಯರಸ್ತೆಯಲ್ಲಿ ಹಾಗೂ ಸುತ್ತ ಮುತ್ತಲಿನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ, ವತಿಯಿಂದ ಒಳಚರಂಡಿಯ ಕೊಳವೆಗಳನ್ನು ಅಳವಡಿಸುತ್ತಿದ್ದು, ರಸ್ತೆಗಳಲ್ಲಿ ಹೆಚ್ಚುವರಿ ಮಣ್ಣುವಿರುವದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವುದರಿಂದ ರಸ್ತೆಗಳಲ್ಲಿ ಹೆಚ್ಚುವರಿ ಮಣ್ಣನ್ನು ತೆಗೆಯಲು ಶ್ರೀ ದಾಸಪ್ಪ ಹೆಗಡೆನಗರ ರವರು ಕೋರಿದರು.
- ವಾರ್ಡ್‌ಅಭಿಯಂತರರು ಮಾತನಾಡಿ ಥಣಿಸಂದ್ರ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಕಾವೇರಿ ಕುಡಿಯುವ ನೀರಿನ ಸಂಪರ್ಕವನ್ನು ಮನೆ ಮನೆಗಳಿಗೆ ನೀಡುವ ಕಾರ್ಯ ಈಗಾಗಲೇ ಪ್ರಾರಂಭಿಸಲಾಗಿದ್ದು, ಬಿ.ಡಬ್ಲ್ಯೂ.ಎಸ್.ಎಸ್.ಬಿ,ಯ ಸಂಬಂದಪಟ್ಟ ಅಧಿಕಾರಿಗಳು ಈ ಕೆಳಕಂಡ ಪ್ರದೇಶಗಳಲ್ಲಿ **ಭಾಗ್ಯಶ್ರೀ ಬಡಾವಣೆ, ಅಮರಜ್ಯೋತಿ ಬಡಾವಣೆ, ಬಿ.ಡಿ.ಎಸ್. ಬಡಾವಣೆ, ಶಿರಡಿ ಸಾಯಿ ರತನ ಲೇಓಟ್, ಅಂಜನಾದ್ರ ಬಡಾವಣೆ, ವಾಜಿದ್ ಬಡಾವಣೆ**ಗಳಲ್ಲಿ ಕೂಡಲೇ ಸಂಪರ್ಕ ನೀಡಲು ಕ್ರಮ ವಹಿಸಬೇಕಾಗಿ ಕೋರಿದರು.

**3. ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ**

- ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿಯನ್ನು ಸರಿಯಾಗಿ ಆಗುತ್ತಿರುವುದಿಲ್ಲ ಎಂದು ಸಾರ್ವಜನಿಕರು ಹಾಗೂ ವಿವಿಧ ಬಡಾವಣೆಗಳಿಂದ ಹಾಜರಾದ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರುಗಳು ಹಾಗೂ ಸಾರ್ವಜನಿಕರು ತಿಳಿಸಿದರು. ಈ ವಿಷಯದ ಬಗ್ಗೆ ಸಂಬಂದಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರಾದ ಶ್ರೀಮತಿ ಚಿತ್ರಾ ಜಯರಾಮ ರವರು ಮಾತನಾಡಿ ಘನತ್ಯಾಜ್ಯಕ್ಕೆ ಸಂಬಂದಿಸದ ಪ್ರಕರಣವು ಈ ಹಿಂದೆ ಘನ ನ್ಯಾಯಾಲಯದಲ್ಲಿತ್ತು. ಘನ ನ್ಯಾಯಾಲಯವು ವಲಯ ಆಯುಕ್ತರು ರವರ ಹತ್ತಿರ ವಿವಾದವನ್ನು ಇತ್ಯರ್ಥ ಪಡಿಸಿಕೊಳಲು ನಿರ್ದೇಶನ ನೀಡಿದ್ದು, ಆದರೆ ಲಿಖಿತ ಮೂಲಕ ನ್ಯಾಯಾಲಯದಿಂದ ವಲಯ ಆಯುಕ್ತರು ರವರಿಗೆ ಆದೇಶವನ್ನು ಬಂದಿರುವುದಿಲ್ಲ, ಘನ ನ್ಯಾಯಾಲಯದ 'ಆದೇಶ ಬಂದ ತಕ್ಷಣ ಅಗತ್ಯ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.
- ಸಾರ್ವಜನಿಕರು ಮಾತನಾಡಿ ದಿನ ದಿಂದ ದಿನಕ್ಕೆ ವಾರ್ಡ್ ವ್ಯಾಪ್ತಿಯಲ್ಲಿ ಬ್ಲಾಕ್ ಸ್ಪಾಟ್‌ಗಳು ಹೆಚ್ಚಾಗುತ್ತಿರುವುದಾಗಿ ತಿಳಿಸಿದರು.

**4. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆ ಬಗ್ಗೆ.**

- ಸಾರ್ವಜನಿಕರು ಮಾತನಾಡಿ ವಾರ್ಡ್ ವ್ಯಾಪ್ತಿಯ ಕೆಲವು ರಸ್ತೆಗಳಲ್ಲಿ ಬೀದಿ ದೀಪಗಳು ದುರಸ್ಥಿಯಾಗಿರುತ್ತವೆ ಎಂದು ತಿಳಿಸಿದರು.

**5. ಇನ್ನಿತರೆ ವಿಷಯಗಳು ಮಾನ್ಯ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ**

- ಶ್ರೀ **ಶ್ರೀನಿವಾಸ್‌ರಾವ್** ರವರು ಮಾತನಾಡಿ, ಏರ್ ಪೋರ್ಟ್ ಮೆಟ್ರೊ ನಿರ್ಮಾಣಕ್ಕಾಗಿ ಬಿ.ಎಂ.ಆರ.ಸಿ.ಎಲ್ ರವರು ನಾಗವಾರ ಕೆರೆಯ ಪ್ರದೇಶವನ್ನು ನೀಡುವಂತೆ ಕೋರಿದ್ದು, ಯಾವುದೇ ಕಾರಣಕ್ಕೂ ಕರ್ನಾಟಕ ಸರ್ಕಾರ ನಾಗವಾರ ಕೆರೆಯ ಪ್ರದೇಶದಲ್ಲಿ ನಿರ್ಮಾಣ ಕಾಮಗಾರಿಗೆ

ಅನುಮತಿ ಕೊಡಬಾರದೆಂದು ಹಾಗೂ ಕೆರೆ ಮತ್ತು ಅದರ ಸುತ್ತ ಜಲಾಯನ ಪ್ರದೇಶವನ್ನು ಸಂರಕ್ಷಿಸಬೇಕು ಎಂದು ಕೋರದರು. ಈ ಸಂಬಂದ ಹಾಜರಿದ್ದ ಸದಸ್ಯರುಗಳು ಮತ್ತು ಸಾರ್ವಜನಿಕರು ಸಹ ಸಹಮತ ವ್ಯಕ್ತಪಡಿಸಿದರು ಮತ್ತು ವಾರ್ಡ್ ಸಮಿತಿಯ ಸದಸ್ಯರುಗಳು ಅಗತ್ಯವಿರುವ ಸಮಯದಲ್ಲಿ ಸ್ವಯಂ ಸೇವಕರಾಗಿ ಕಾರ್ಯ ನಿರ್ವಹಿಸಲು ಐ.ಡಿ ಕಾರ್ಡ್ ಗಳು ಅವಶ್ಯಕವಾಗಿದ್ದು, ಬಿ.ಬಿ.ಎಂ.ಪಿ ವತಿಯಿಂದ ಸಮಿತಿಯ ಸದಸ್ಯರುಗಳಿಗೆ ಗುರುತಿನ ಚೀಟಿ ನೀಡಬೇಕಾಗಿ ಕೋರಿದರು.

- **ದಾಸಪ್ಪ ಹೆಗಡೆ ನಗರರವರು** ಮಾತನಾಡಿ ಹೆಗಡೆನಗರದಲ್ಲಿ ಅನೇಕ ಕಡೆಯಲ್ಲಿ ನೀರಿನ ಪೈಪುಗಳು ಕಟ್‌ಯಾಗಿದ್ದು, ಕೂಡಲೇ ದುರಸ್ತಿ ಮಾಡಲು ಕೋರಿದರು ಹಾಗೂ ಹೆಗಡೆನಗರ ಪಶ್ಚಿಮ ಭಾಗದ ಮುಖ್ಯ ರಸ್ತೆಯಲ್ಲಿ ಮಾರ್ಗದಲ್ಲಿ ತಳ್ಳುವ ಗಾಡಿಗಳು ಹೆಚ್ಚಾಗಿದ್ದು, ಬೀದಿ ವ್ಯಾಪಾರಿಗಳೂ ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ನಡೆಸುತ್ತಿರುವುದರಿಂದ ಸಾರ್ವಜಕರಿಗೆ ಓಡಾಡಲು ತೊಂದರೆಯಾಗುತ್ತಿರುವದರಿಂದ ಚಿಕ್ಕಜಾಲ ಟ್ರಾಫೀಕ್ ಪೋಲೀಸ್ ರವರು ಅಗತ್ಯಕ್ರಮ ವಹಿಸಲು ಕೋರಿದರು..
- **ವಾರ್ಡ್ ಅಭಿಯಂತರರು** ಮಾತನಾಡಿ ಥಣಿಸಂದ್ರ ಮುಖ್ಯ ರಸ್ತೆಯಲ್ಲಿ ಬರುವ ಸಾಧೀಕ್ ಬಡಾವಣೆ ಮತ್ತು ಮಾರುತಿ ಸಾಮಿಲ್ ಜಂಕ್ಷನ್‌ಗಳಲ್ಲಿ ಪಾದಚಾರಿ / ರಸ್ತೆಗಳಲ್ಲಿ ಬೀದಿ ವ್ಯಾಪಾರಿಗಳು ವ್ಯಾಪಾರ ಮಾಡುತ್ತಿರುವದರಿಂದ ಸಾರ್ವಜನಿಕರಿಗೆ ಓಡಾಡಲು ಮತ್ತು ವಾಹನಗಳ ಓಡಾಟಕ್ಕೆ ತೊಂದರೆಯಾಗುತ್ತಿರುವ ಕಾರಣ ಬಾಣಸವಾಡಿ ಟ್ರಾಫಿಕ್ ಪೋಲೀಸ್ ಸ್ಟೇಷನ್ ರವರು ಅಗತ್ಯಕ್ರಮ ವಹಿಸಲು ಕೋರಿದರು.
- ಟೂಬಾ ಬಡಾವಣೆಯಲ್ಲಿ ರಸ್ತೆ ಮತ್ತು ಚರಂಡಿಗಳ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದ್ದು, ರಸ್ತೆಗೆ ಹೊಂದಿಕೊಂಡಿರುವ ಚರಂಡಿಯಲ್ಲಿಯೇ ಇರುವ 2-3 ವಿದ್ಯುತ್ ಕಂಬಗಳನ್ನು ಕೂಡಲೇ ಪಕ್ಕಕ್ಕೆ ಸ್ಥಳಾಂತರ ಮಾಡಬೇಕಾಗಿರುತ್ತದೆ ಆದುದರಿಂದ ಈ ಬಗ್ಗೆ ಬೆಸ್ಕಾಂ ಇಲಾಖೆಯವರಿಗೆ ಸೂಚನೆ ನೀಡಲು ಕೋರಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಿಶೇಷ ಆಯುಕ್ತರು (ಆಸ್ತಿಗಳು) ಬಿ.ಬಿ.ಎಂ.ಪಿ ರವರು ಮಾತನಾಡಿ ಮೇಲ್ಕಂಡಂತೆ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರಿಗಣಿಸಿ ಎಲ್ಲಾ ದೂರು ಮತ್ತು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಗತ್ಯಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳಿಗೆ ಹಾಗೂ ವಿವಿಧ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಹಾಜರಾಗಿರುವ ಸಾರ್ವಜನಿಕರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

04/09/2021

ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 06, (ಥಣಿಸಂದ್ರ)

04/09/21

ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)
ಹಾಗೂ ವಿಶೇಷ ಆಯುಕ್ತರು(ಆಸ್ತಿಗಳು)ಬಿ.ಬಿ.ಎಂ.ಪಿ

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.